ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 4ನೆ ಡಿಸೆಂಬರ್ 1903.

ಸ್ ಈ 1903ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರ ಪ್ರಾತಃಕಾಲ 8 ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಶಾರ್ಪರುಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಸಾಮಾನ್ಯ ಸಭೆ ಕೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು.—

ಡೆಫರ್ಡ್ ಪ್ರಾಪೋಜಿಶನ್ಸ್‌ಗಳು.

1. ಸಿಟಿಯಲ್ಲಿ ಹೆಚ್ಚಾಗಿ ದನ ಕರುಗಳನ್ನು ಇಟ್ಟುಕೊಳ್ಳತಕ್ಕ ರೀತಿ ಮತ್ತು ಆ ವಿಷಯದಲ್ಲಿ ಕವಾಡಿಗರ ಕರ್ತವ್ಯ ವಗೈರೆ ಸಂಗತಿಗಳಿಗೆ ಸಂಬಂಧಪಟ್ಟ ಮಸವಿದಾ ಬೈಲಾಗಳು.

2. ಗುಂಡು ಟಾಪು ಜಟ್ಕಾ ಬಂಡಿಗಳಿಗೆ ಛಂಡಿ ಹೊಡಿಯುವವನ ತಲೆಗೆ ನೇರವಾಗಿ ಎರಡು ಪಾರ್ಶ್ವದಲ್ಲೂ ಕಿಟಕಿಗಳನ್ನು ಇಡುವದರ ಮೂಲಕ, ಪಕ್ಕದಲ್ಲಿ ಹೋಗತಕ್ಕ ಗಾಡಿಗಳಿಗೆ ಜಟ್ಕಾಗಾಡಿ ತಗಲಿ ಉಂಟಾಗಬಹುದಾದ ಅಪಾಯವನ್ನು ತಪ್ಪಿಸತಕ್ಕ ವಿಷಯ.

ಆರ್ಡಿನರಿ ಪ್ರಾಪೋಜಿಶನ್ಸ್‌ಗಳು.

1. ಸ್ ಈ 1903ನೆ ಇಸವಿಯ ನವೆಂಬರ್ ಮಾಹೆ ಚಾಲತಿ ನಗದು ಜಮಾ ಖರ್ಚು ಲಿಖ್ಕಗಳು, ತಗಾದೆ ವಸೂಲಿ ಮತ್ತು ಬಾಕಿ ಸ್ಟೇಟ್‌ಮೆಂಟ್, ಮರಣದ ಲಿಖ್ಕ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರ ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲೀಷ್ ಮತ್ತು ಕನ್ನಡ ಸ್ಕೂಲುಗಳ ಲೆಖ್ಕಗಳು, ಪ್ರಸುವಾಸ್ಪತ್ರೆಯ ಲೆಖ್ಕ, ಲಂಗರು ಖಾನೆಯ ಲೆಖ್ಕ, ದಳವಾಡಾ ಲೆಖ್ಕ, ನಾಯಿಗಳನ್ನು ಕೊಲ್ಲಲ್ಪಟ್ಟ ಇನಾಂಗಳ ಲೆಖ್ಕ ಮತ್ತು ಪ್ರಾಸಿಕ್ಯೂಷನ್ ಮಾಡಲ್ಪಟ್ಟವರ ತಖ್ತೆ.

2. ಇಂಡಿಯಾ ಗೌರ್ನಮೆಂಟಿನವರ ಮಂಜೂರಾತಿ ಇಲ್ಲದೆ ಮದ್ರಾಸ್ ರೈಲ್ವೆ ಕಂಪೆನಿಯವರಿಂದ ಸಿಟಿ ರೈಲ್ವೆ ಸ್ಟೇಷನ್ ಕಟ್ಟಡಗಳ ಮೇಲೆ ಇದುವರಿಗೂ ವಸೂಲ್ ಮಾಡಿರುವ ದೀಪದ ಕಂದಾಯವನ್ನು ರೀಫಂಡು ಮಾಡುವ ವಿಷಯದಲ್ಲಿ ಬೋರ್ಡಿನವರ ಮನೋಗತ ತಿಳಿಯಲಪೇಕ್ಷಿಸಿ ಮೈಸೂರು ಶ್ರೀಮರ್ ಮಹಾರಾಜಾ ಸರ್ಕಾರದ ಜನರಲ್ ವರವಿನ್ಯು ಸೆಕ್ರಿಟೆರಿಯವರಿಂದ ಬಂದಿರುವ ಚಾಲತಿ ಇಸವಿ ಅಕ್ಟೋಬರ್ 17ನೆ ಮರ್ಕುಂ 1455—L. F. 210-93ನೆ ನಂಬರು ಡಾಕಿಟ್.

3. ಮಲ್ಲೇಶ್ವರದಿಂದ ಗುಟ್ಟಹಳ್ಳಿ ರಸ್ತೆ ವರಿಗೆ ಹೊಸದಾಗಿ ರೋಡ್ ಹಾಕುವದಕ್ಕಾಗಿ ತಯಾರಾದ 581 ರೂಪಾಯಿನ ಅಂದಾಜು.

4. ಚಾಲತಿ ಇಸವಿ ಏಪ್ರೆಲ್ 30ನೆ ಮರ್ಕುಂನ ಬೋರ್ಡು ಮೀಟಿಂಗ್‌ನಲ್ಲಿ ತೀರ್ಮಾನವಾಗಿರುವಂತೆ ಮ್ಯುನಿಸಿಪಲ್ ಕಮಿಶಾರ್ಪರಗಳಿಗೆ ಅವರ ತಿಳುವಳಿಕೆಗೋಸ್ಕರ ಕೊಡಬೇಕಾಗಿರುವ ಸಿಟಿ ವ್ಯಾಪುಗಳ ತಯಾರಿ ಬಗ್ಗೆ 3,000 ರೂಪಾಯಿ ಲಾಗಾಯ್ತು 4,000 ರೂಪಾಯಿ ವರಿಗೆ ಲಾಗವಡು ಆಗಬಹುದೆಂದು ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರವರು ವ[illegible]ವ 814—20-10-03ನೆ ನಂಬರು ರಿಪೋರ್ಟು.

5. ಲಂಗರಖಾನೆ, ಅನ್ನಛತ್ರ ಮತ್ತು ಇಕ್ಯೂರೆಬಿಲ್ ವಾರ್ಡ್ ವಹಿವಾಟು ವಿಷಯದಲ್ಲಿ ಸಬ್ ಕಮಿಟಿಯವರು ಮಾಡಿರುವ ರಿಪೋರ್ಟು.

ಪಿ. ಪಲಿಪ್,
ಛಾರ್ ಪ್ರೆಸಿಡೆಂಟ್.

ಅಮೃತಮಹಲ್ ಇಲಾಖಾ.

ಇನ್ವಿಟೇಶನ್ ಹಾರ್‌ನಾಮೆ.

ತಾರೀಖು 28ನೆ ನವೆಂಬರ್ 1903, ಮೂಕ್ತಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಶ್ರೀಮೆಯ ಅಮೃತಮಹಲ್ ಇಲಾಖಾದಲ್ಲಿರುವ ನಾಲ್ಕು ನರ್ಷ ವಯಸ್ಸಿನ್ನಳ್ಳ ಕೆಲವು ಹೋರಿಗಳನ್ನು ಮತ್ತು ಕಲವು ಹಸುಗಳನ್ನು ಹಾಸನದ ತಾಲ್ಲೂಕು ಸೋಮನಹಳ್ಳಿ ಕಾವಲಿನಲ್ಲಿ ಸ್ ಈ 1903ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರದ ಲಾಗಾಯಿತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಛಡ ದರಖಾಸ್ತು ಮಾಡಿ ಪಡೆದುಬಹುದು.

ಹೆಚ್. ನಂಜುಂಡರಾಜೆ ಅರಸ್,
ಸೂಪರ್‌ಟೆಂಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್, ತಾರೀಖು 8ನೆ ಡಿಸೆಂಬರ್ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕಾಣೆ.

1901ನೆ ಇಸವಿ ಖಾನಿಷ್‌ಮಾರಿ ಲೆಖ್ಕದ ಬಾಬತು ಜಾತಿವಾರ್ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.